# KARNATAK UNIVERSITY, DHARWAD

No. KU-Syndicate/ Proceedings- 19/2022-23/ A-18/12 Date: 7 MAY 2022

**"CONFIDENTIAL"**

The Special Syndicate meeting was held on **5th May, 2022 at 11.30 am** in the Syndicate Hall, Administrative Building, Karnatak University, Dharwad and the proceedings of the Syndicate meeting are as follows:

**The following members were present**

| | | |
|---|---|---|
| 1. | Prof. K.B. Gudasi, Vice-Chancellor K.U.Dharwad | Chairman |
| 2. | Dr. Mallikarjun Patil, K.U. Dharwad | Member |
| 3. | Smt. Hamsaveni N., Dharwad | Member |
| 4. | Dr. K.D. Haveripeth, Salakinakoppa, Dharwad | Member |
| 5. | Dr. Ramesh L. Rathod, Sunkalbidari | Member |
| 6. | Dr.(Smt). Kamala D. Dhawale, Dharwad | Member |
| 7. | Sri. R.B. Godi, Kundagol | Member |
| 8. | Dr. D. V. Honagannavar, Hubballi | Member |
| 9. | Sri Jayaprakash S. Badami, Navalgund | Member |
| 10. | Sri. Prakash Rayakar, Hubballi | Member |
| 11. | Dr. Shantanagouda C. Jakkanagoudar, Shiggaon | Member |
| 12. | Sri Sudhindra Deshpande, Dharwad | Member |
| 13. | Sri Ravikumar Maliger, Dharwad | Member |
| 14. | Dr. B. Basavanagoud., K.U. Dharwad | Member |
| 15. | Dr.(Smt). A.N. Tamragundi,, Finance Officer, K.U. Dharwad | Special Invitee |
| 16. | Sri. Yashpal Kshirsagar. Registrar (Admn), K.U. Dharwad | Member Secretary |

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 08ಕ್ಕಿಂತ ಹೆಚ್ಚು ಅಂದರೆ 16 ಜನ ಸದಸ್ಯರುಗಳು ಹಾಜರಿರುವುದನ್ನು ಖಚಿತಪಡಿಸಿಕೊಂಡು ನಿಗದಿತ ಸಮಯಕ್ಕೆ ಸರಿಯಾಗಿ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಮಾನ್ಯ ಕುಲಪತಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿ, ನೂತನವಾಗಿ ಕುಲಸಚಿವರು (ಆಡಳಿತ)ವಾಗಿ ನೇಮಕಗೊಂಡ ಶ್ರೀ. ಯಶಪಾಲ ಕ್ಷೀರಸಾಗರIFS ಇವರನ್ನು ಪರಿಚಯಿಸಿ, ಸ್ವಾಗತಿಸಿದರು. ನಂತರ ಸಭೆಯ ಕಲಾಪವನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

ಕುಲಸಚಿವರು ಕುಲಪತಿಗಳು

**ಕಲಂ ಸಂಖ್ಯೆ 01:– ವಿಷಯ: ಕವಿವಿಯ 72ನೇ ಘಟಿಕೋತ್ಸವ ಮತ್ತು ಈ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್‌ಗಾಗಿ ಸ್ವೀಕೃತಗೊಂಡ ಪ್ರಸ್ತಾವನೆಗಳಲ್ಲಿಯ ಹೆಸರುಗಳನ್ನು ಪರಿಗಣಿಸಿ, ಪರಿಶೀಲನಾ ಸಮಿತಿಗೆ ಮಂಡಿಸುವ ಕುರಿತು.**

**ಪ್ರಸ್ತಾವನೆ:**

ಕರ್ನಾಟಕ ವಿಶ್ವವಿದ್ಯಾಲಯದ ಮುಂಬರುವ 2021ನೇ ಸಾಲಿನ 72ನೇ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲು ವಿಶ್ವವಿದ್ಯಾಲಯದ ಸಿಂಡಿಕೇಟ್ ಮತ್ತು ವಿದ್ಯಾವಿಷಯಕ್ ಪರಿಷತ್ ಸದಸ್ಯರಿಂದ ಗಣ್ಯವ್ಯಕ್ತಿಗಳ ಹೆಸರುಗಳನ್ನು ಸೂಚಿಸಲು ತಿಳಿಸಲಾಗಿತ್ತು. ಅದರಂತೆ, ಸಿಂಡಿಕೇಟ ಸದಸ್ಯರು ಮತ್ತು ವಿದ್ಯಾವಿಷಯಕ್ ಪರಿಷತ್ ಸದಸ್ಯರುಗಳು ಹೆಸರುಗಳನ್ನು ಸೂಚಿಸಿ, ಪತ್ರಗಳನ್ನು ಬರೆದಿರುತ್ತಾರೆ ಹಾಗೂ ಕರ್ನಾಟಕ ಸರ್ಕಾರದ ವಿಧಾನಸಭಾ, ವಿಧಾನ ಪರಿಷತ್ ಮತ್ತು ಮಾಜಿ ಮತ್ತು ಹಾಲಿ ಮಂತ್ರಿಗಳು ಸಹ ಹೆಸರುಗಳನ್ನು ಸೂಚಿಸಿರುತ್ತಾರೆ. ಅದರಂತೆ, ಗಣ್ಯವ್ಯಕ್ತಿಗಳ ಹೆಸರುಗಳನ್ನು ಸೂಚಿಸಿ ಬರೆದ ಪತ್ರಗಳನ್ನು ಹಾಗೂ ಪರಿಚಯ ವಿವರವನ್ನು ಸ್ವೀಕೃತವಾಗಿವೆ.

ಸದರಿ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡುವ ಸಲುವಾಗಿ ಘನತೆವೆತ್ತ ರಾಜ್ಯಪಾಲರ ಸಚಿವಾಲಯದ ಸುತ್ತೋಲೆ ಸಂಖ್ಯೆ GS 02 GUM 2016 dated 18.02.2016 ರಲ್ಲಿ ಈ ಕೆಳಗಿನಂತೆ ಮಾರ್ಗಸೂಚಿಗಳನ್ನು ಅನುಸರಿಸಲು ತಿಳಿಸಿರುತ್ತಾರೆ.

1. The recommendation for the approval of the Chancellor for the conferment of the Honorary Degree shall be in conformity with Section 69 of the KSU Act 2000
2. The names before proposed must be properly considered and deliberated in the Syndicate.
3. After deliberation and consideration of such names in the Syndicate, the same shall be forwarded to the Scrutinizing Committee by the University.
4. The Chancellor may constitute expert scrutiny committee consisting of three members. One among the members of the committee is the nominee of the University nominated from amongst the former Vice-Chancellors, retires Secretaries of Govt. of Karnataka or Union of India,
5. The University may nominate its nominee to the scrutinizing the Committee well in advance.
6. The recommendations of the University for conferring Honorary Degree must be forwarded to the Scrutinizing Committee at least 45 days in advance to the date of Convocation.
7. The number of names proposed by the Scrutiny Committee to confer honorary degrees should not exceed more than three in a year.
8. the names proposed/ recommended by the Syndicate of the University should be kept confidential and under no circumstances be disclosed to the recipient or to the Press till the approval of the Chancellor is communicated.

ಅದರಂತೆ, ಕವಿವಿಯ **'Statute Governing the Conferring of Honorary Doctorate Degrees during Annual Convocation'** ನ್ನು ಘನತೆವೆತ್ತ ರಾಜ್ಯಪಾಲರು ಹಾಗೂ ವಿಶ್ವವಿದ್ಯಾಲಯದ ಕುಲಾಧಿಪತಿಗಳಿಂದ ದಿನಾಂಕ 27.01.2020ರಂದು ಅನುಮೋದನೆ ಪಡೆದ ಪೂರ್ವೋಕ್ತ ಪರಿನಿಯಮಗಳನ್ನು ಸರ್ಕಾರದ ಅಧೀನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಇವರು ತಮ್ಮ ಪತ್ರ ಸಂಖ್ಯೆ ಇಡಿ 19 ಯುಕೆಎಸ್ 2016 ದಿನಾಂಕ 12.02.2020ರಂದು ಕಳುಹಿಸಿಕೊಟ್ಟಿರುತ್ತಾರೆ. ಈ ಕೆಳಕಾಣಿಸಿದ ಪರಿನಿಯಮದಂತೆ ಕ್ರಮಕೈಗೊಳ್ಳಲು ತಿಳಿಸಿರುತ್ತಾರೆ.

ಕುಲಸಚಿವರು

ಕುಲಪತಿಗಳು

**4. Process of Recommendation**

i. The University Syndicate shall properly consider and deliberate on all the applications/ proposals received for the award of Honorary Doctorates.

ii. After the deliberations the Syndicate will recommended the names by a majority of not less than two-thirds of its members present.

iii. The University shall forward such names to the scrutinizing Committee at least 45 days in advance to the date of Convocation

iv. The University shall nominate its nominee to the Scrutinizing Committee well in advance.

**5. Confidentiality:**

The names recommended by the University Syndicate shall be kept confidential and under no circumstances be disclosed to anybody or to the press till the approval of H.E. the Chancellor is received

ಆದ್ದರಿಂದ, ಮುಂಬರುವ 72ನೇ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡುವ ಸಲುವಾಗಿ ಪ್ಯಾರಾ 02(b) ಮತ್ತು (c) ಹಾಗೂ ಪ್ಯಾರಾ 03ರ 04(a) ಮತ್ತು (b) ಪ್ರಕಾರ ಈಗಾಗಲೇ ಸ್ವೀಕೃತಗೊಂಡ ಪ್ರಸ್ತಾವನೆಗಳಲ್ಲಿನ ಹೆಸರುಗಳನ್ನು ಪರಿಗಣಿಸಿ, ತಜ್ಞರ ಪರಿಶೀಲನಾ ಸಮಿತಿಗೆ (Expert Scrutiny Committee) ಕಳುಹಿಸಿಕೊಡಲು ಅನುಮತಿಗಾಗಿ ಸಿಂಡಿಕೇಟ್ ಮುಂದೆ ಮಂಡಿಸಲಾಯಿತು.

**ಸಭೆಯಲ್ಲಿ ಸದರಿ ವಿಷಯವನ್ನು ಪ್ರಸ್ತಾಪಿಸಿದಾಗ,**

ಘನತೆವೆತ್ತ ರಾಜ್ಯಪಾಲರ ಕಚೇರಿಯ ಮೌಖಿಕ ನಿರ್ದೇಶನದಂತೆ ಮೇ, 2022ರ ಒಳಗಾಗಿ ಘಟಿಕೋತ್ಸವವನ್ನು ಜರುಗಿಸಬೇಕೆಂದು ತಿಳಿಸಿದ ನಿಮಿತ್ಯ, ಘಟಿಕೋತ್ಸವ ಜರುಗಿಸುವ ಕುರಿತು ಸಂಪೂರ್ಣವಾಗಿ ಚರ್ಚಿಸಿಲಾಯಿತು.

ಶ್ರೀ ಸುದೀಂದ್ರ ದೇಶಪಾಂಡೆರವರು ಮಾತನಾಡಿ ಗೌರವ ಡಾಕ್ಟರೇಟ್ ನೀಡುವ ಕುರಿತಾಗಿ ತಜ್ಞರ ಪರಿಶೀಲನಾ ಸಮಿತಿ ವಿಷಯವು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರಲ್ಲಿ ನಮೂದಾಗಿರುವುದಿಲ್ಲ. ಆದರೆ, ಈ ವಿಷಯಕ್ಕೆ ಸಂಬಂಧಿಸಿದ ಘನತೆವೆತ್ತ ರಾಜ್ಯಪಾಲರ ಕಾರ್ಯಾಲಯದ ಸುತ್ತೋಲೆ ಮತ್ತು ವಿಶ್ವವಿದ್ಯಾಲಯದ ಅನುಶಾಸನದಲ್ಲಿ ಸಿಂಡಿಕೇಟ್ ತಜ್ಞರ ಪರಿಶೀಲನಾ ಸಮಿತಿಗೆ ಹೆಸರುಗಳನ್ನು ಸಲ್ಲಿಸುವುದೆಂದು ಇರುತ್ತದೆ ಎಂದರು.

ಕುಲಪತಿಗಳು ಗೌರವ ಡಾಕ್ಟರೇಟ್ ಪ್ರಧಾನಕ್ಕೆ ಸ್ವೀಕೃತಗೊಂಡ ಪ್ರಸ್ತಾವನೆಗಳನ್ನು ಒಂದಾದ ಮೇಲೆ ಒಂದರಂತೆ ಒಟ್ಟು 26 ಪ್ರಸ್ತಾವನೆಗಳಲ್ಲಿಯ ಗಣ್ಯವ್ಯಕ್ತಿಯ ಹೆಸರು ಮತ್ತು ಸಾಧನೆಗಳನ್ನು ಮತ್ತು ವಿವರಗಳನ್ನು ತಿಳಿಸಲು ಹಣಕಾಸು ಅಧಿಕಾರಿಗಳಿಗೆ ಹೇಳಿದರು. ಅದರಂತೆ, ಹಣಕಾಸು ಅಧಿಕಾರಿಗಳು ಕ್ರಮವಹಿಸಿದರು. ಮುಂದುವರೆದು, ಸದರಿ 26 ಪ್ರಸ್ತಾವನೆಗಳನ್ನು ಸಭೆಯಲ್ಲಿ ಸುದೀರ್ಘವಾಗಿ/ ಸವಿಸ್ತಾರವಾಗಿ ಚರ್ಚಿಸಿ, ಅಂತಿಮವಾಗಿ 14 ಪ್ರಸ್ತಾವನೆಗಳನ್ನು ಮುಂದಿನ ಕ್ರಮಕ್ಕಾಗಿ ಶಿಫಾರಸ್ಸು ಮಾಡಿತು.

ಘಟಿಕೋತ್ಸವ ಜರುಗಿಸಲು ದಿನಾಂಕ ಮತ್ತು ಮುಖ್ಯ ಅತಿಥಿ ಆಯ್ಕೆ ಮಾಡಲು ಪತ್ರ ಬರೆಯುವುದು. ಮತ್ತು ಉನ್ನತ ಶಿಕ್ಷಣ ಸಚಿವರನ್ನು ಆಹ್ವಾನಿಸಲು ಪತ್ರ ಬರೆಯುವುದು. ಇದಕ್ಕೆ ಸಂಬಂಧಿಸಿದಂತೆ, ವಿವಿಧ ಸಮಿತಿಗಳನ್ನು ರಚಿಸುವುದು, ಸುವರ್ಣಪದಕ, ರ್‍ಯಾಂಕ ಯಾದಿ, ಹಾಗೂ ಇನ್ನಿತರೇ ಎಲ್ಲ ವ್ಯವಸ್ಥೆಯನ್ನು ಮಾಡುವ ಕುರಿತಾಗಿ ಚರ್ಚಿಸಲಾಯಿತು. ಗೌನಗಳ ಬದಲಿಗೆ ಖಾದಿ ಬಟ್ಟೆ & ಶಾಲ್‌ಗಳನ್ನು ಘಟಿಕೋತ್ಸವದಲ್ಲಿ ಬಳಸುವ ಕುರಿತು ಚರ್ಚಿಸಲಾಯಿತು.

ಕುಲಸಚಿವರು — ಕುಲಪತಿಗಳು

## ನಿರ್ಣಯ

ಕರ್ನಾಟಕ ವಿಶ್ವವಿದ್ಯಾಲಯದ 2021ನೇ ಸಾಲಿನ 72ನೇ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್‌ಗಾಗಿ ಸ್ವೀಕೃತಗೊಂಡ ಪ್ರಸ್ತಾವನೆಗಳಲ್ಲಿಯ ಹೆಸರುಗಳನ್ನು ಪರಿಗಣಿಸಿ, ಪರಿಶೀಲನಾ ಸಮಿತಿಗೆ ಮಂಡಿಸುವ ಕುರಿತು, ಸಭೆಯಲ್ಲಿ ಸ್ವೀಕೃತಗೊಂಡ 26 ಪ್ರಸ್ತಾವನೆಗಳನ್ನು ಪರಿಶೀಲಿಸಿ, ಒಟ್ಟು ಸೂಕ್ತವಿರುವ 14 ಪ್ರಸ್ತಾವನೆಯಲ್ಲಿರುವ ಹೆಸರುಗಳನ್ನು ಘನತೆವೆತ್ತ ರಾಜ್ಯಪಾಲರಿಂದ ರಚಿತಗೊಂಡ ತಜ್ಞರ ಪರಿಶೀಲನಾ ಸಮಿತಿಗೆ (Expert Scrutiny Committee) ಕಳುಹಿಸಿಕೊಡಲು ಸಿಂಡಿಕೇಟ್ ತೀರ್ಮಾನಿಸಿತು.

ಮುಂದುವರೆದು, ಘಟಿಕೋತ್ಸವಕ್ಕೆ ಸಂಬಂಧಿಸಿದ ಎಲ್ಲ ವ್ಯವಸ್ಥೆಯನ್ನು ಮಾಡಬೇಕೆಂದು ಸಂಬಂಧಿಸಿದ ವಿಭಾಗಗಳಿಗೆ ನಿರ್ದೇಶನ ನೀಡಬೇಕೆಂದು ಸಿಂಡಿಕೇಟ್ ತೀರ್ಮಾನಿಸಿತು.

ಕುಲಸಚಿವರು

ಕುಲಪತಿಗಳು

## ಅಧ್ಯಕ್ಷರ ಅಪ್ಪಣೆಯ ಮೇರೆಗೆ ಬಂದ ವಿಷಯಗಳು

**ಕಲಂ ಸಂಖ್ಯೆ 02:- ವಿಷಯ:** ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಡಾ.(ಶ್ರೀಮತಿ). ಶ್ರೀದೇವಿ ಪಿ.ಜಿ. ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಇಂಗ್ಲೀಷ್ ಅಧ್ಯಯನ ವಿಭಾಗ, ಕವಿವಿ, ಧಾರವಾಡ ಇವರ ನೇಮಕಾತಿ ರದ್ದುಪಡಿಸುವ ಕುರಿತು.

ಶ್ರೀ. ಪ್ರಕಾಶ ರಾಯಕರ, ಸಿಂಡಿಕೇಟ್ ಸದಸ್ಯರು ಅವರು ಡಾ.(ಶ್ರೀಮತಿ). ಶ್ರೀದೇವಿ ಪಿ.ಜಿ. ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಇಂಗ್ಲೀಷ್ ಅಧ್ಯಯನ ವಿಭಾಗ, ಕವಿವಿ, ಧಾರವಾಡ ಇವರ ನೇಮಕಾತಿ ರದ್ದುಪಡಿಸಿದ ವಿಷಯವನ್ನು ಪ್ರಸ್ತಾಪಿಸಿ, ಮಾನ್ಯ ನ್ಯಾಯಾಲಯದ ಆದೇಶವನ್ನು ತುರ್ತಾಗಿ ಪಾಲಿಸಬೇಕೆಂದರು. ಈ ವಿಷಯದ ಕುರಿತು ಕೆಳಗಿನಂತೆ ಚರ್ಚಿಸಲಾಯಿತು.

ಕುಲಸಚಿವರು (ಆಡಳಿತ) ಅವರು ಮಾತನಾಡಿ ಡಾ.(ಶ್ರೀಮತಿ). ಶ್ರೀದೇವಿ ಪಿ.ಜಿ. ಇವರು ಸಲ್ಲಿಸಿದ ಮನವಿಗೆ ಕಾನೂನು ಅಭಿಪ್ರಾಯ ಕೋರಿದ್ದು ಅದರಂತೆ ಕ್ರಮವಹಿಸಲಾಗುವುದು. ಮತ್ತು ನೇಮಕಾತಿ ಪ್ರಾಧಿಕಾರ ಸಿಂಡಿಕೇಟ ಸಭೆ ಆಗಿರುವುದರಿಂದ ಡಾ.(ಶ್ರೀಮತಿ). ಶ್ರೀದೇವಿ ಪಿ.ಜಿ. ಇವರ ಪ್ರಕರಣವನ್ನು ಸಿಂಡಿಕೇಟ ಸಭೆಗೆ ಮಂಡಿಸುವುದು ಸೂಕ್ತವೆಂದರು. ಕಾನೂನು ಸಲಹೆಗಾರರು ಕಾರಣಾಂತರಗಳಿಂದ ರಜೆ ಇರುವುದರಿಂದ, ಕಾನೂನು ಸಲಹೆಯನ್ನು ನೈಸರ್ಗಿಕ ನ್ಯಾಯಯುತ ಸಿದ್ಧಾಂತಗಳ ಸಲುವಾಗಿ ಪಡೆಯಬಹುದಾಗಿದೆ ಎಂದು ತಿಳಿಸಿದರು.

ಶ್ರೀ. ಸುಧೀಂದ್ರ ದೇಶಪಾಂಡೆ ಅವರು ಮಾನ್ಯ ಉಚ್ಚ ನ್ಯಾಯಾಲಯದ ಅಂತಿಮ ಆದೇಶದ ದಿನಾಂಕವನ್ನು ಪರಿಶೀಲಿಸಲು ತಿಳಿಸಿದರು.

ಶ್ರೀ. ರವಿಕುಮಾರ ಮಾಳಿಗೇರ ಅವರು ಡಾ.(ಶ್ರೀಮತಿ). ಶ್ರೀದೇವಿ ಪಿ.ಜಿ. ಇವರ ವಿಷಯವು ಸದರಿ ಸಭೆಯ ವಿಷಯಪಟ್ಟಿಯಲ್ಲಿ ಇರುವುದಿಲ್ಲ ಎಂದರು.

ಶ್ರೀ. ಸುಧೀಂದ್ರ ದೇಶಪಾಂಡೆ ಅವರು ಸದಸ್ಯರು ನೀಡಿದ ಪತ್ರದ ಬಗ್ಗೆ ಯಾಕೆ ಚರ್ಚಿಸಬಾರದು ಎಂದರು. ಉಳಿದ ಸದಸ್ಯರು ಈ ಪ್ರಕರಣದ ಕುರಿತು ಇಂದು ಚರ್ಚಿಸುವುದು ಅಗತ್ಯವಿದೆಯೆಂದರು.

ಶ್ರೀ. ಸುಧೀಂದ್ರ ದೇಶಪಾಂಡೆರವರು ಮಾತನಾಡಿ ಮಾನ್ಯ ನ್ಯಾಯಾಲಯದ ಆದೇಶವನ್ನು ಪಾಲಿಸದಿದ್ದಲ್ಲಿ ನ್ಯಾಯಾಂಗ ನಿಂದನೆಯಾಗುತ್ತದೆ ಎಂದರು.

ಶ್ರೀಮತಿ ಹಂಸವೇಣಿ. ಎನ್., ಅವರು ಡಾ.(ಶ್ರೀಮತಿ). ಶ್ರೀದೇವಿ ಪಿ.ಜಿ. ಇವರಿಗೆ ಈ ವಿಷಯವಾಗಿ ಕಲಂ ಸಹಿಯಾಗುವ ಮುಂಚೆ ಹೇಗೆ ಗೊತ್ತಾಯಿತು ಹಾಗೂ ಅವರು ವಿಶ್ವವಿದ್ಯಾಲಯವು ಆತುರದ ನಿರ್ಧಾರವನ್ನು ಕೈಗೊಂಡಿರುತ್ತದೆ ಎಂದು ದೂಷಿಸಿರುತ್ತಾರೆ. ಎಂದು ಹೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ ಕಾನೂನು ಸಲಹೆಗಾರರು ಆದಷ್ಟು ಬೇಗನೆ ಕಚೇರಿಗೆ ಹಾಜರಾಗುತ್ತಾರೆ ಎಂದು ತಿಳಿಸಿ, ಈ ಪ್ರಕರಣದಲ್ಲಿ ಕೆಲವು ಕಾನೂನು ಪರಿಭಾಷೆ ಇರುವುದರಿಂದ ಕಾನೂನು ಅಭಿಪ್ರಾಯ ಪಡೆಯುವುದು ಸೂಕ್ತವೆಂದರು.

ಶ್ರೀ. ಸುಧೀಂದ್ರ ದೇಶಪಾಂಡೆ ಅವರು ಮಾತನಾಡಿ, ಈ ಪ್ರಕರಣದ ಬಗ್ಗೆ ಕ್ರಮ ಜರುಗಿಸಲು ವಿಶ್ವವಿದ್ಯಾಲಯದ ವಕೀಲರು ಏಕೆ ವಿಳಂಬ ಮಾಡಿರುತ್ತಾರೆ ಎಂದು ಅಭಿಪ್ರಾಯಿಸಿರುತ್ತಾರೆ.

ಕುಲಸಚಿವರು ಕುಲಪತಿಗಳು

ಮಾನ್ಯ ಕುಲಪತಿಗಳು ಮಾತನಾಡಿ, ಸದರಿ ಪ್ರಕರಣದ ಕುರಿತು ಕ್ರಮ ಜರುಗಿಸುವುದು ಅಥವಾ ಕ್ರಮ ಜರುಗಿಸದೇ ಇರುವ ಪ್ರಶ್ನೆಯೇ ಉದ್ಭವಾಗಿರುವುದಿಲ್ಲ. ಆದರೆ ವಿಶ್ವವಿದ್ಯಾಲಯವು ಸ್ವಾಯತ್ತ ಸಂಸ್ಥೆಯಾಗಿರುವುದರಿಂದ ಕೆಲವು ವಿಧಾನಗಳನ್ನು ಅನುಸರಿಸಲು ಕಾನೂನು ಸಲಹೆಗಾರರ ಅಭಿಪ್ರಾಯವನ್ನು ಕೋರಲಾಗಿದೆ ಎಂದರು.

ಶ್ರೀ. ಪ್ರಕಾಶ ರಾಯಕರ ಅವರು ಆದಷ್ಟು ಬೇಗನೆ ಕ್ರಮ ಜರುಗಿಸಬೇಕೆಂದರು.

**ನಿರ್ಣಯ**

ಮಾನ್ಯ ಉಚ್ಚ ನ್ಯಾಯಾಲಯದ W.A. ಸಂಖ್ಯೆ 100226/2021 ರ ಆದೇಶದಂತೆ ಕ್ರಮಕೈಗೊಳ್ಳಲು ಸಮಂಜಸ ವಿಧಾನಗಳನ್ನು ಅನುಸರಿಸಲು ತ್ವರಿತವಾಗಿ ಕಾನೂನು ಅಭಿಪ್ರಾಯ ಪಡೆದು ಕಾನೂನಾತ್ಮಕ ಕ್ರಮ ಜರುಗಿಸಬೇಕೆಂದು ಸಿಂಡಿಕೇಟ ನಿರ್ಣಯಿಸಿತು.

ಕುಲಸಚಿವರು ಕುಲಪತಿಗಳು